# <u>ಮುಂದಿನ 7 ವರ್ಷಗಳಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಭಿವೃದ್ಧಿಗೆ ನೀವು ಏನು ಬಯಸುತ್ತೀರಿ</u>

## "ವಿಷನ್ – 2025"

ರಾಜ್ಯ ಸರ್ಕಾರವು **"ವಿಷನ್–2025"** ಡಾಕ್ಯುಮೆಂಟ್ ಎಂಬ ಹೆಸರಿನಲ್ಲಿ ಮುಂದಿನ 7 ವರ್ಷಗಳ ಅವಧಿಯಲ್ಲಿ ಕರ್ನಾಟಕ ರಾಜ್ಯದ ಸಮಗ್ರ ಅಭಿವೃದ್ಧಿಯನ್ನು ದೃಷ್ಟಿಯಲ್ಲಿರಿಸಿಕೊಂಡು ನೀಲ ನಕ್ಷೆ ಮತ್ತು ಅನುಷ್ಠಾನ ಕಾರ್ಯಗಳ ಬಗ್ಗೆ ಯೋಜನೆಗಳನ್ನು ಸಿದ್ದಪಡಿಸಲು ಈ ರೀತಿಯ ಸಲಹಾ ಪ್ರಕ್ರಿಯೆಯನ್ನು ಪ್ರಾರಂಭಿಸಿದೆ. ಈ ಪ್ರಕ್ರಿಯೆಯಲ್ಲಿ ಸರ್ಕಾರದ ಪ್ರಮುಖ ಇಲಾಖೆಗಳಾದ ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಕ್ಷೇತ್ರಗಳು, ಮೂಲ ಸೌಕರ್ಯಗಳು, ಉದ್ಯೋಗ ಮತ್ತು ಕೌಶಲ್ಯ, ಕೈಗಾರಿಕಾ ಅಭಿವೃದ್ದಿ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ, ಆರೋಗ್ಯ ಮತ್ತು ಪೋಷಣೆ, ಶಿಕ್ಷಣ, ಗ್ರಾಮೀಣಾಭಿವೃದ್ದಿ, ನಗರಾಭಿವೃದ್ದಿ, ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ, ಸೇವೆಗಳು, ಆಡಳಿತ, ಕಾನೂನು ಮತ್ತು ಸುವ್ಯವಸ್ಥೆ – ನ್ಯಾಯಾಧಿಕರಣ ಎಂಬ 13 ವಲಯಗಳನ್ನು ಒಳಗೊಂಡಿರುತ್ತದೆ.

ಈ ಹಿನ್ನೆಲೆಯಲ್ಲಿ, ರಾಜ್ಯ ಸರ್ಕಾರವು ಸಾರ್ವಜನಿಕರ ಹಾಗೂ ಪ್ರತಿ ಕನ್ನಡಿಗನ ಆಕಾಂಕ್ಷೆ, ಅಪೇಕ್ಷೆ ಮತ್ತು ಬರವಸೆಯನ್ನು ಪ್ರತಿಬಿಂಬಿಸುವಂತಹ ನಾಗರೀಕರ ಪ್ರತಿಕ್ರಿಯೆ, ಅಭಿಪ್ರಾಯ, ಉತ್ತರ ಮತ್ತು ಇತ್ಯಾಧಿಗಳನ್ನು ಆಹ್ವಾನಿಸಲು ಉದ್ದೇಶಿಸಿರುತ್ತದೆ.

**ಆದ್ದರಿಂದ, ಮುಂದಿನ 7 ವರ್ಷಗಳಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಮಗ್ರ ಅಭಿವೃದ್ದಿಗೆ ನೀವು ಏನು ಬಯಸುತ್ತೀರಿ ? ಈ ಸಂಬಂಧ ಸಲಹೆ, ಪ್ರತಿಕ್ರಿಯೆ, ಅಭಿಪ್ರಾಯ, ಕಲ್ಪನೆ, ಒಳನೋಟ, ವೈವಿದ್ಯಮಯ ದೃಷ್ಟಿಕೋನ ಮತ್ತು ಉತ್ತರಗಳನ್ನು ಈ ಜಿಲ್ಲೆಯ ಸಾರ್ವಜನಿಕರಿಂದ ಆಹ್ವಾನಿಸಲಾಗಿದೆ.**

ಸಾರ್ವಜನಿಕರು ಈ ಕೆಳಕಾಣಿಸಿದ ಇ–ಮೇಲ್ ಐ.ಡಿ.ಗೆ ತಮ್ಮ ಲೇಖನ/ಪ್ರತಿಕ್ರಿಯೆಗಳನ್ನು ಸಲ್ಲಿಸಬಹುದಾಗಿದೆ: **vision2025brur@gmail.com**